# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:-ಶ್ರೀ ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯನ್ನು ಹಕ್ಕಿನಲ್ಲಿರುವ ರಜೆಯೆಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಕಾರಣಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 179 ವಿಸೇಬಿ 2012. 06-02-2013.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:409:ಜಿಅಪ:2011(ಭಾಗ). ದಿ: 17-05-2012.

3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:358:ಪಬವ:2012. ದಿ:23-08-2012.

4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:179:ವಿಸೇಬಿ:2012.ದಿ:29.02.2016.

5. ಶ್ರೀ ರಾಧಾಕೃಷ್ಣರೆಡ್ಡಿ, ಇವರ ಮನವಿ ದಿ:30-05-2016.

-------

ಪ್ರಸ್ತಾವನೆ:-

2010-11ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಕ್ರಿಯಾ ಯೋಜನೆಯಡಿಯಲ್ಲಿ ಅನುಮೋದನೆಗೊಂಡ ಎಂ.ಗೋನಾಳ ಗ್ರಾಮದ ಗೌಡರ ಜಿನ್ನಿನಿಂದ ಗ್ರಾಮ ಪಂಚಾಯತಿ ಕಛೇರಿಯವರೆಗಿನ ಕಾಮಗಾರಿಗೆ ರೂ.4.00ಲಕ್ಷಗಳನ್ನು ಮತ್ತು ಅದೇ ಗ್ರಾಮದ ಪಂಚಾಯಿತಿ ಸಮುದಾಯ ಭವನದಿಂದ ಗೌಡರ ಜಿನ್ನಿಯವರೆಗೆ ರೂ.5.00ಲಕ್ಷಗಳ ಕಾಮಗಾರಿಗಳು ನಡೆಯದಿದ್ದರೂ ರೂ.3.21.500/- ಗಳನ್ನು ಪಾವತಿಸಿರುತ್ತಾರೆ. ಈ ಎರಡು ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಪೂರಕ ದಾಖಲೆಗಳಾದ ಫೋಟೋ.ವಿಡಿಯೋ & ಎಂ.ಬಿ.ರೇಕಾರ್ಡ ಮತ್ತಿತರೆ ಆಧಾರಗಳು ಇಲ್ಲದಿದ್ದರೂ ಡ್ರಾ ಮಾಡಿರುವುದಲ್ಲದೇ, ಈ ಕಾಮಗಾರಿಗಳಿಗೆ ಸಾಮಗ್ರಿಗಳನ್ನು ಪಡೆಯದಿದ್ದರೂ ಶ್ರೀ.ಗಂಗಾಧರ ಎಂಬುವವರಿಗೆ ರೂ.1.84.982/- ಗಳನ್ನು ಪಾವತಿಸಿ.ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದರಿಂದ ಕರ್ತವ್ಯ ಲೋಪವೆಸಗಿ.ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದರಿಂದ ಸದರಿ ಅಧಿಕಾರಿಯನ್ನು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ:17-05-2012ರ ಆದೇಶದಲ್ಲಿ ಶ್ರೀ ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ಇವರನ್ನು ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ:23-08-2012ರ ಆದೇಶದಲ್ಲಿ ಶ್ರೀ ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ಇವರ ಅಮಾನತ್ತು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ:29-02-2016ರ ಆದೇಶದಲ್ಲಿ ಶ್ರೀ ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ರವರ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಉಲ್ಲೇಖ(1)ರಂತೆ ದಿನಾಂಕ 6-2-2013ರ ಕಾರಣ ಕೇಳುವ ನೋಟಿಸಿನ ಜೊತೆಗೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂದಿಸಿದಂತೆ ಕರ್ನಾಟಕ ನಾಗರಿಕ ಸೇವಾ ನಿಯಮ(ವ.ನಿ.ಮೇ)ನಿಯಮಗಳು 1957ರ ನಿಯಮ 8(11)ರಡಿ ಪ್ರದತ್ತವಾದ ಅಧಿಕಾರದನ್ವಯ ವಾಗ್ದಂಡನೆ ವಿಧಿಸಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಶ್ರೀ ರಾಧಾಕೃಷ್ಣರೆಡ್ಡಿ, ಇವರು ದಿ:30-05-2016 ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ, 2010-11ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಕರ್ತವ್ಯಲೋಪದ ಬಗ್ಗೆ ತಮ್ಮ ಸಮಜಾಯಿಷಿಯನ್ನು ಸರ್ಕಾರವು ಅಂಗೀಕರಿಸಿ, ಜಾರಿ ಮಾಡಿರುವ ಆರೋಪಗಳಿಗೆ ವಾಗ್ದಂಡನೆ ವಿಧಿಸಿ ಆದೇಶಿಸಿದೆ. ಅಮಾನತ್ತಿನ ಅವಧಿಯಲ್ಲಿ ಅರ್ಧವೇತನವನ್ನು ಮಂಜೂರು ಮಾಡಲಾಗಿದ್ದು, ಉಳಿದ ಅವಧಿಗೆ ತಮ್ಮ ಹಕ್ಕಿನಲ್ಲಿರುವ ಪರಿವರ್ತಿತ ರಜೆಯನ್ನು ಮತ್ತು ದಿನಾಂಕ: 17-05-2012 ರಿಂದ ದಿನಾಂಕ:23-8-2012ರ ವರಗೆ ಕಳೆದ ಅಮಾನತ್ತು ಅವಧಿಯನ್ನು ಹಕ್ಕಿನಲ್ಲಿರುವ ರಜೆಯೆಂದು ಪರಿಗಣಿಸಲು ಕೋರಿರುತ್ತಾರೆ.

ಶ್ರೀ ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ರವರ ವಿರುದ್ಧ ದಿನಾಂಕ 6-2-2013ರ ಕಾರಣ ಕೇಳುವ ನೋಟಿಸಿನ ಜೊತೆಗೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂದಿಸಿದಂತೆ ಕರ್ನಾಟಕ ನಾಗರಿಕ ಸೇವಾ ನಿಯಮ(ವ.ನಿ.ಮೇ)ನಿಯಮಗಳು 1957ರ ನಿಯಮ 8(11)ರಡಿ ಪ್ರದತ್ತವಾದ ಅಧಿಕಾರದನ್ವಯ ದೋಷಾರೋಪಣೆ ಪಟ್ಟಿಗೆ ಸಂಬಂಧಿಸಿದಂತೆ ದಿನಾಂಕ: 29-02-2016ರನ್ವಯ ವಾಗ್ದಂಡನೆ ವಿಧಿಸಿ ಆದೇಶಿಸಿರುವುದರಿಂದ ಸದರಿಯವರುಗಳು ದಿನಾಂಕ: 17-05-2012 ರಿಂದ ದಿನಾಂಕ:23-8-2012ರ ವರಗೆ ಕಳೆದ ಅಮಾನತ್ತು ಅವಧಿಯನ್ನು ಅವರ ಹಕ್ಕಿನಲ್ಲಿರುವ 186 ಪರಿವರ್ತಿತ ರಜೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 100(7) ರನ್ವಯ ಮಂಜೂರು ಮಾಡಿ, ದಿನಾಂಕ: 17-05-2012 ರಿಂದ ದಿನಾಂಕ:23-8-2012ರ ವರೆಗಿನ ಅಮಾನತ್ತು ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 100ರಡಿಯಲ್ಲಿ ಸಕ್ರಮಗೊಳಿಸಿ ಅವರ ಹಕ್ಕಿನಲ್ಲಿರುವ ರಜೆ/ಅಸಾಧಾರಣ ರಜೆಯೆಂದು ಪರಿಗಣಿಸುವುದು ಸೂಕ್ತವೆಂದು ಸರ್ಕಾರವು ತಿರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 121 ವಿಸೇಚಿ 2016, ಬೆಂಗಳೂರು ದಿನಾಂಕ: 10-11-2016.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಶ್ರೀ ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ರವರು ಅಮಾನತ್ತಿನಲ್ಲಿ ಕಳೆದ ದಿನಾಂಕ: 17-05-2012 ರಿಂದ ದಿನಾಂಕ:23-8-2012ರ ವರೆಗಿನ ಅವಧಿಯನ್ನು ಅವರ ಹಕ್ಕಿನಲ್ಲಿರುವ 186 ಪರಿವರ್ತಿತ ರಜೆಗಳು ಎಂದು ಪರಿಗಣಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 100(7)ರ ಪ್ರಕಾರ ಅವರ ಹಕ್ಕಿನಲ್ಲಿರುವ ರಜೆ/ ಅಸಾಧಾರರಣ ರಜೆಯೆಂದು ಪರಿಗಣಿಸಿ ಅದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/11/2016

(ಎಸ್ ರಂಗನಗೌಡ),
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ.
3. ಶ್ರೀ ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,(ನಿ) ತಾಲ್ಲೂಕು ಪಂಚಾಯತಿ ಬಳ್ಳಾರಿ.ಶ್ರೀ.ನಿಲಯ.ಬಿ.ಎಲ್.ಗೌಡ ಲೇ ಔಟ್.ಕೆಳಗೋಟೆ.ತುರುವನೂರ್ ರೋಡ್.ನವೀನ್ ಹೋಟೇಲ್ ಹಿಂಭಾಗ.ಚಿತ್ರದುರ್ಗ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) /ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
5. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
6. ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.